ಒ.ಎಸ್.ನಂ. 185/2016, ಪಿ.ಡಬ್ಲ್ಯೂ.01
ದಿನಾಂಕಃ- 15.03.2018

ಸಾಕ್ಷಿಯನ್ನು ಮಧ್ಯಂತರ ಅರ್ಜಿಯ ಮೇಲಿನ ಆದೇಶದಂತೆ ಪುನಃ ಕರೆಸಲಾಯಿತು ಪ್ರಮಾಣ ವಚನ ಬೋಧಿಸಲಾಯಿತು.

## ಪಾಟೀ ಸವಾಲು 4 ಮತ್ತು 5ನೇ ಪ್ರತಿವಾದಿ ಪರ ವಕೀಲರಿಂದ

ನಾನು ಎಸ್‌ಎಸ್‌ಎಲ್‌ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ದಾವಾ ಸ್ವತ್ತನ್ನು ನನ್ನ ತಾಯಿ 1948 ರಲ್ಲಿ ಕ್ರಯಕ್ಕೆ ಪಡೆದಿರುತ್ತಾರೆ. ದಿನಾಂಕ, ತಿಂಗಳು ನನಗೆ ನೆನಪಿಲ್ಲ. ದಾವಾ ಸ್ವತ್ತನ್ನು ನನ್ನ ತಾಯಿ ದಫೇದಾರ್ ನಾರಾಯಣಪ್ಪರವರ ಮಗ ಅನಂತರಾವ್ ರವರ ಕಡೆಯಿಂದ ಕ್ರಯಕ್ಕೆ ಪಡೆದಿರುತ್ತಾರೆ. ದಾವಾ ಸ್ವತ್ತಿನ ಖಾತೆ ಸಂಖ್ಯೆ 614 ಅದರ ವಿಸ್ತೀರ್ಣ ಪೂಃಪ- 24 ಗಜ ಮತ್ತು ಉಃದ-13 ಗಜ ಇರುತ್ತದೆ. ಅದರ ಚಕ್ಕುಬಂಧಿ ಪೂರ್ವಕ್ಕೆ ರಿ.ಸ.ನಂ.8 ರ ಜಮೀನು, ಪಶ್ಚಿಮಕ್ಕೆ ದಾರಿ, ಉತ್ತರಕ್ಕೆ ನಾವು ತೆಗೆದುಕೊಂಡಾಗ ನೇಯ್ಗೆ ರಾಮಯ್ಯನ ಮನೆ ಮತ್ತು ದಕ್ಷಿಣಕ್ಕೆ ಸರ್ಕಾರಿ ಜಮೀನು ಇರುತ್ತದೆ.

ದಾವಾ ಸ್ವತ್ತಿನ ಖರೀದಿಯ ಕಾಲಕ್ಕೆ ಇದ್ದ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ಆದರೆ ಈಗಿನ ಖಾತೆ ಸಂಖ್ಯೆ 614 ಇದೆ. ದಾವಾ ಸ್ವತ್ತಿನ ಖಾತೆ ಸಂಖ್ಯೆ ನನಗೆ ಗೊತ್ತಿಲ್ಲ. ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಈ ದಾವೆಯನ್ನು ಪ್ರತಿವಾದಿಯರ ವಿರುದ್ಧ ಸುಳ್ಳು ದಾವೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ರಿ.ಸ.ನಂ.8 ರ ಜಮೀನು ನನ್ನ ಹೆಸರಿನಲ್ಲಿದೆ. ರಿ.ಸ.ನಂ.8 ರ ಜಮೀನು ಎಷ್ಟು ವಿಸ್ತೀರ್ಣ ಇದೆ ಅಂತ ದಾಖಲೆಗಳನ್ನು ನೋಡದೆ ಹೇಳಲಾಗುವುದಿಲ್ಲ. ರಿ.ಸ.ನಂ.8 ರ ಜಮೀನು ನನ್ನ ಪಿತ್ರಾರ್ಜಿತ ಸ್ವತ್ತು. ಸದರಿ ಜಮೀನು ನನಗೆ ಪಾಲುವಿಭಾಗದ ಮೂಲಕ ಬಂದಿರುತ್ತದೆ. ಸದರಿ ಜಮೀನು ನನಗೆ ಬಂದ ನಂತರ ನಾನು ಅದನ್ನು ಅಳತೆ ಮಾಡಿಸಿ ಹದ್ದುಬಸ್ತು ಗುರುತಿಸಿಕೊಂಡಿರುತ್ತೇನೆ. ರಿ.ಸ.ನಂ.8 ರ ಜಮೀನಿಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನೆನಪಿಲ್ಲ. ಸದರಿ ಜಮೀನಿನ ದಾಖಲೆಗಳನ್ನು ದುರಸ್ಥಿಮಾಡಿಸಿಕೊಂಡಿಲ್ಲ, ಆದ್ದರಿಂದ ನ್ಯಾಯಾಲಯಕ್ಕೆ ಸಲ್ಲಿಸಿಲ್ಲ ಎಂದರೆ ಸರಿಯಲ್ಲ.

ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ಸರ್ಕಾರದ ಜಮೀನಿನ ವಿಸ್ತೀರ್ಣ ಎಷ್ಟು ಇದೆ ಅಂತ ನನಗೆ ಹೇಳಲಾಗುವುದಿಲ್ಲ. ದಾವಾ ಸ್ವತ್ತಿನ ದಕ್ಷಿಣಕ್ಕೆ ಇರುವ ಸರ್ಕಾರದ ಜಮೀನಿನ ವಿಸ್ತೀರ್ಣ 01 ಎಕರೆ 28 ಗುಂಟೆ ಜಮೀನು ಇದೆ ಅಂತ ಅದರ ಪಹಣಿಯನ್ನು ಸಾಕ್ಷಿಗೆ ತೋರಿಸಿ ಕೇಳಲಾಗಿ ಅವರು ಒಪ್ಪಿಕೊಂಡಿರುತ್ತಾರೆ. ಸದರಿ 01 ಎಕರೆ 28 ಗುಂಟೆ ಜಮೀನಿನಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಗ್ರಾಮ ಪಂಚಾಯ್ತಿ ಕಟ್ಟಡ ಮತ್ತು ಗ್ರಂಥಾಲಯ ಇವೆ ಎಂದರೆ ಸರಿ. ನನಗೆ ಈಗ ತೋರಿಸಿದ ಭಾವಚಿತ್ರದಲ್ಲಿ ಮೇಲೆ ಹೇಳಿದ ಜಮೀನಿನಲ್ಲಿರುವ ಶಾಲೆಯ ಕಾಂಪೌಂಡ್ ಗೋಡೆ ಎಂದರೆ ಸಾಕ್ಷಿಯು ನನಗೆ ಸರಿಯಾಗಿ ಕಾಣದ ಕಾರಣ

ಹೇಳಲಾಗುವುದಿಲ್ಲ ಅಂತ ನುಡಿಯುತ್ತಾರೆ. ಸದರಿ ಭಾವಚಿತ್ರದಲ್ಲಿ ಸ್ಪಷ್ಟವಾಗಿ ಕಾಣಿಸುತ್ತಿದ್ದರೂ ಸಹ ನನಗೆ ಕಾಣಿಸುವುದಿಲ್ಲಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಶಾಲಾ ಕಾಂಪೌಂಡ್‌ಗೆ ಹೊಂದಿಕೊಂಡು ಇರುವ ಜಾಗವೇ ದಾವಾ ಸ್ವತ್ತು ಎಂದರೆ ಸರಿ. ದಾವಾ ಸ್ವತ್ತಿನ ಪೂರ್ವಕ್ಕೆ ಇರುವ ರಿ.ಸ.ನಂ.8 ರಲ್ಲಿರುವ ತೆಂಗಿನ ಮರಗಳು ಇವೆ ಎಂದರೆ ಸರಿ. ರಿ.ಸ.ನಂ.8 ರ ಪಶ್ಚಿಮ ದಿಕ್ಕಿಗೆ ಮತ್ತು ದಾವಾ ಸ್ವತ್ತಿನ ಪೂರ್ವ ದಿಕ್ಕಿಗೆ ಇರುವ ಗುಡಿಸಲು 2ನೇ ಪ್ರತಿವಾದಿಗೆ ಸೇರಿದ ಗುಡಿಸಲು ಎಂದರೆ ಸರಿ. 2ನೇ ಪ್ರತಿವಾದಿಯ ಗುಡಿಸಲಿಗೆ ಹೊಂದಿಕೊಂಡು ಇರುವ ಗುಡಿಸಲು 1ನೇ ಪ್ರತಿವಾದಿಗೆ ಸೇರಿದ ಗುಡಿಸಲು ಎಂದರೆ ಸರಿ.

2ನೇ ಪ್ರತಿವಾದಿಯ ಗುಡಿಸಲು ಮನೆಯಾದ ನಂತರ 3ನೇ ಪ್ರತಿವಾದಿಯ ಮನೆ ಬರುತ್ತದೆ ಎಂದರೆ ಸರಿ.

ನನ್ನ ತಾಯಿಯು ದಾವಾ ಸ್ವತ್ತನ್ನು ಚಳ್ಳಕೆರೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಕ್ರಯಪತ್ರದ ನೋಂದಣಿ ಮೂಲಕ ಕ್ರಯಕ್ಕೆ ಪಡೆದಿರುತ್ತಾರೆ. ನನ್ನ ತಾಯಿ ಚಳ್ಳಕೆರೆ ಉಪನೋಂದಣಾಧಿಕಾರಿಗಳ ಕಛೇರಿಯಲ್ಲಿ ಕ್ರಯ ನೋಂದಣಿ ಮಾಡಿಕೊಂಡಿರುವುದಿಲ್ಲ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಾಯಿ ಯಾವಾಗ ತೀರಿಕೊಂಡರು ಅಂತ ನನಗೆ ನೆನಪಿಲ್ಲ. ನನ್ನ ತಾಯಿ ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಪಂಚಾಯ್ತಿ ದಾಖಲೆಯಲ್ಲಿ ಆಕೆಯ ಹೆಸರಿಗೆ ಖಾತೆಯಾಗಿರುತ್ತದೆ. ನಾನು ಪಂಚಾಯ್ತಿ ದಾಖಲಾತಿಗಳನ್ನು ನನ್ನ ತಾಯಿಯ ಹೆಸರಿನಲ್ಲಿದ್ದ ಬಗ್ಗೆ ತೋರಿಸಲು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ದಾವಾ ಸ್ವತ್ತು ನನ್ನ ತಾಯಿಯ ಹೆಸರಿಗೆ ಖಾತೆಯಾಗದೇ ಇರುವುದರಿಂದ ಅವುಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

ನ್ಯಾಯಾಲಯದ ಬೆಳಗಿನ ಕಾಲಾವಧಿ ಮುಗಿದಿದ್ದರಿಂದ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸರಿಯಿದೆ,

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಚಳ್ಳಕೆರೆ.